**ದಿನಾಂಕಃ 03-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಸಿ.ಎಚ್.ಕೆ. ವಕೀಲರಿಂದಃ**

ನಾನು ಬಿ.ಎ. ವರೆಗೆ ಓದಿದ್ದೇನೆ. ಈ ಪ್ರಕರಣದ 1 ರಿಂದ 4 ನೇ ವಾದಿಯರು ನನ್ನ ಸಹೋದರಿಯರು. 1 ರಿಂದ 4 ನೇ ವಾದಿಯರ ಮದುವೆಯಾಗುವುದಕ್ಕಿಂತ ಮೊದಲು ನಾವು ಹಾಗೂ ಅವರು ಕೂಡಿ ಇದ್ದೆವು ಎಂದರೆ ಸರಿ. ಮದುವೆಯಾದ ನಂತರವೂ ವಾದಿಯರು ನಮ್ಮ ಮನೆಗೆ ಬಂದು-ಹೋಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ರಿಂದ 4 ನೇ ವಾದಿಯರನ್ನು ನಮ್ಮ ಊರಿನ ವರಗಳೊಂದಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಕನವಳ್ಳಿ ಗ್ರಾಮದಲ್ಲಿಯೇ ಇವೆ ಎಂದರೆ ಸರಿ. ನಾವು ಹಾಗೂ 1 ರಿಂದ 4 ನೇ ವಾದಿಯರು ಕನವಳ್ಳಿ ಗ್ರಾಮದಲ್ಲಿಯೇ ಇರುತ್ತೇವೆ ಎಂದರೆ ಸರಿ. ನನ್ನ ತಂದೆ ಮರಣಹೊಂದುವುದಕ್ಕಿಂತ ಮೊದಲು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮೃತ್ಯುಪತ್ರವನ್ನು ಬರೆದಿಟ್ಟಿರಲಿಲ್ಲ. ಈ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಮರಣ ಹೊಂದಿದ ನಂತರ ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲನ್ನು ನೀಡಿಲ್ಲ. 1 ನೇ ವಾದಿಯನ್ನು ದಿಃ 25-05-1970 ರಂದು ಮದುವೆ ಮಾಡಿಕೊಡಲಾಗಿದೆ ಎನ್ನುವ ಬಗ್ಗೆ ಅಂಜುಮನ್ ಎ ಇಸ್ಲಾಂ ಕಮಿಟಿಯವರು ಪ್ರಮಾಣಪತ್ರ ನೀಡಿದ್ದಾರೆ ಎಂದರೆ ನೀಡಿರಬಹುದು ಎಂದು ಸಾಕ್ಷಿ ಉತ್ತರಿಸುತ್ತಾರೆ. ಅದನ್ನು ಯಾರು ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 2 ನೇ ವಾದಿಯ ಮದುವೆ ದಿಃ 12-05-1972 ರಂದು ಆಗಿದೆ ಎಂದರೆ ಸರಿ. 3 ನೇ ವಾದಿಯ ಮದುವೆ ದಿಃ 23-04-1976 ರಂದು ಆಗಿದೆ ಎಂದರೆ ಸರಿ. 4 ನೇ ವಾದಿಯ ಮದುವೆ ದಿಃ 09-05-1986 ರಂದು ಆಗಿದೆ ಎಂದರೆ ಸರಿ. ಪೀರ್ ಸಾಬ್, ಅಲಿಸಾಬ್, ಫಕ್ಕಿರಸಾಬ್, ಇಮಾಮ್ ಸಾಬ್, ಮೌಲಾಸಾಬ್, ಇಸ್ಮಾಯಿಲ್ ಸಾಬ್, ಮೌದಿನ್ ಸಾಬ್ ಹಾಗೂ ಮೀರಾಸಾಬ್ ಇವರು ದಾವಾ ಆಸ್ತಿಗಳಿಗೆ ಸಂಬಂಧಪಟ್ಟವರು ಅಲ್ಲ ಎಂದರೆ ಸರಿಯಲ್ಲ. ಇವರೆಲ್ಲರೂ ದಾವಾ ಆಸ್ತಿಗಳಿಗೆ ಸಂಬಂಧಪಟ್ಟವರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿರುವ

ಆಸ್ತಿಯನ್ನು 1954 ರಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನ್ನ ಅಣ್ಣ ಹಾಗೂ ನನ್ನ ತಂದೆ ಕೂಡಿ ಖರೀದಿಸಿದ್ದಾರೆ. ಸದರಿ ಆಸ್ತಿಯ ಖರೀದಿ ಪತ್ರದಲ್ಲಿ ಅದನ್ನು ಮರ್ಧಾನ್ ಸಾಬ್ ಇವರು ಖರೀದಿಸಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ನಾವು ನಮ್ಮ ಅಣ್ಣ ಅವರಿಗೆ ಹಣ ಕೊಟ್ಟಿದ್ದು, ಅವರು ಹಿರಿಯರು ಎಂದು ಅವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ.

ನಿಡಿ-2 ರನ್ವಯ ಆಸ್ತಿಯನ್ನು ಖರೀದಿಸಿದಾಗ ವಾದಿಯರ ಮದುವೆಯಾಗಿರಲಿಲ್ಲ ಎಂದರೆ ಸರಿ. ಸರ್ವೆ ನಂ.192/3 ಇದನ್ನು ದಿಃ 26-12-1969 ರಂದು ಖರೀದಿಸಲಾಗಿದೆ ಎಂದರೆ ಸಾಕ್ಷಿ ನಾವು ನಮ್ಮ ಅಣ್ಣ ಅವರಿಗೆ ಹಣ ಕೊಟ್ಟಿದ್ದು, ಅವರು ಹಿರಿಯರು ಎಂದು ಅವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಸದರಿ ಖರೀದಿ ಪತ್ರ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ನಾವು ಹಣ ಕೊಟ್ಟಿದ್ದು ಅವರ ಹೆಸರಿನಲ್ಲಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾವು ದುಡಿದು ಅವರ ಬಳಿ ಹಣ ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ನಿಡಿ-4 ರನ್ವಯ ಸರ್ವೆ ನಂ.147 ನ್ನು ನನ್ನ ತಂದೆಯವರ ಹೆಸರಿನಲ್ಲಿ 1961 ನೇ ಇಸವಿಯಲ್ಲಿ ಖರೀದಿಸಲಾಗಿದೆ ನಾವು ನಮ್ಮ ಅಣ್ಣ ಅವರಿಗೆ ಹಣ ಕೊಟ್ಟಿದ್ದು, ಅವರು ಹಿರಿಯರು ಎಂದು ಅವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ.

ನಿಡಿ-5 ರನ್ವಯ ಸರ್ವೆ ನಂ.168 ನ್ನು ನನ್ನ ತಂದೆಯವರ ಹೆಸರಿನಲ್ಲಿ 1960 ನೇ ಇಸವಿಯಲ್ಲಿ ಖರೀದಿಸಲಾಗಿದೆ ನಾವು ನಮ್ಮ ಅಣ್ಣ ಅವರಿಗೆ ಹಣ ಕೊಟ್ಟಿದ್ದು, ಅವರು ಹಿರಿಯರು ಎಂದು ಅವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. 1960 ರಲ್ಲಿ ವಾದಿಯರ ಮದುವೆಯಾಗಿರಲಿಲ್ಲ ಎಂದರೆ ಸರಿ.

ನಿಡಿ-6 ರನ್ವಯ ಸರ್ವೆ ನಂ.120/2 ಹಾಗೂ 120/6 ನ್ನು ನನ್ನ ತಂದೆಯವರ ಹೆಸರಿನಲ್ಲಿ 1966 ನೇ ಇಸವಿಯಲ್ಲಿ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಖರೀದಿಸಿದಾಗ ವಾದಿಯರ ಮದುವೆಯಾಗಿರಲಿಲ್ಲ ಅಂದರೆ ಸರಿ.

ನಿಡಿ-7 ರನ್ವಯ ಸರ್ವೆ ನಂ.51 ನ್ನು ಗೌಸುಸಾಬ್ ಇವರ ಹೆಸರಿನಲ್ಲಿ 1976 ನೇ ಇಸವಿಯಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ನಾವೆಲ್ಲರೂ ಒಂದೇ ಮನೆಯಲ್ಲಿ ಇದ್ದೆವು ಎಂದರೆ ಬೇರೆ-ಬೇರೆಯಾಗಿ ಇದ್ದೆವು ಆದರೆ ಒಂದೇ ಮಾಡಿಕೊಳ್ಳುತ್ತಿದ್ದೆವು ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾವು ಬೇರೆಯಾಗಿರುವುದಿಲ್ಲ.

ಮೂಲದಾವೆ ಸಂಖ್ಯೆ.53/2004 ರಲ್ಲಿ ದಾವಾ ಆಸ್ತಿಗಳಲ್ಲಿ ಮೌದಿನ್ ಸಾಬ್ ಹಾಗೂ ಮೀರಾಸಾಬ್ ಇವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ವಜಾ ಗೊಂಡಿರುತ್ತದೆ ಎಂದರೆ ಸರಿ. ನಿಡಿ-11 ರನ್ವಯ ನನ್ನ ಕಾಕಾಗಳು ಸಲ್ಲಿಸಿದ ಆರ್.ಟಿ.ಎಸ್. ಪ್ರಕರಣ ವಜಾಗೊಂಡಿರುತ್ತದೆ ಎಂದರೆ ಸರಿ. ಆರ್.ಟಿ.ಎಸ್. ಪ್ರಕರಣಗಳಲ್ಲಿ ಒಳಗೊಂಡಿರುವ ಆಸ್ತಿಗಳು ನನ್ನ ತಂದೆಯ ಆಸ್ತಿಗಳಾಗಿದ್ದರಿಂದ ಅವುಗಳಲ್ಲಿಯೂ ಕೂಡ ವಾದಿಯರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.121/1 ಬಿ, 368/6, 369/5, 380/1 ಈ ಎಲ್ಲಾ ಆಸ್ತಿಗಳನ್ನು ಕೂಡಿ ಇದ್ದ ಕುಟುಂಬದಲ್ಲಿ ಖರೀದಿಸಿದ ಆಸ್ತಿಗಳಾಗಿದ್ದರಿಂದ ವಾದಿಯರಿಗೆ ನಮ್ಮಷ್ಟೆ ಸಮನಾದ ಪಾಲು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.120/2 ಹಾಗೂ 120/6 ಈ ಎಲ್ಲಾ ಆಸ್ತಿಗಳನು ಕುಟುಂಬದ ಆಸ್ತಿಗಳಾಗಿದ್ದರಿಂದ ವಾದಿಯರಿಗೆ ನಮ್ಮಷ್ಟೆ ಸಮನಾದ ಪಾಲು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.121/1 ಡಿ, 368/6, 369/5, 380/1, 380/2 ಈ ಎಲ್ಲಾ ಆಸ್ತಿಗಳು ನಾವುಗಳು ಅಂದರೆ 10 ರಿಂದ 12 ನೇ ಪ್ರತಿವಾದಿಯರ ಸ್ವಂತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.120/6 ಹಾಗೂ 120/2 ಈ ಎಲ್ಲಾ ಆಸ್ತಿಗಳು 10 ನೇ ಪ್ರತಿವಾದಿಯ ಸ್ವಂತ ಆಸ್ತಿಗಳಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.380/2, 368/6 ಇವುಗಳು ನನ್ನ ತಂದೆಯ ಹೆಸರಿನಲ್ಲಿ ಭೂನ್ಯಾಯ ಮಂಡಳಿಯಿಂದ ರೈತಾಪಿಹಕ್ಕು ಪ್ರಾಪ್ತಿಯಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ನನ್ನ ಅಣ್ಣ ಇವರಿಗೆ ರೈತಾಪಿಹಕ್ಕು ಪ್ರಾಪ್ತವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿಗಳು ನನ್ನ ತಂದೆಯ ಆಸ್ತಿಗಳಾಗಿದ್ದರಿಂದ ಅವುಗಳಲ್ಲಿ ವಾದಿಯರಿಗೂ ಕೂಡ ಸಮನಾದ ಪಾಲು ಇದೆ ಎಂದರೆ ಸರಿಯಲ್ಲ. ನಿಡಿ-13 ರಲ್ಲಿಯರ ಸಹಿಗಳಿಗೂ ಹಾಗೂ ನಿಡಿ-14 ಯೂ ಫಾರಂ

ನಲ್ಲಿರುವ ಸಹಿಗಳಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ವಾದಿಯರು ನಮ್ಮ ಪರವಾಗಿ ಹಕ್ಕು ಬಿಟ್ಟುಕೊಡುವ ಪ್ರಸಂಗ ಬಂದಿಲ್ಲ ಎಂದರೆ ಸರಿಯಲ್ಲ, ನಾವು ಖೊಟ್ಟಿದಾಖಲೆಗಳನ್ನು ಸೃಷ್ಟಿಸಿ ನಮ್ಮ ಪರವಾಗಿ ಖಾತೆ ಬದಲಾವಣೆ ಮಾಡಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಡಿ−15 ನ್ನು ಸೃಷ್ಟಿಸಿಕೊಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಾವೇರಿ.

ಡಿ.ಡಬ್ಲ್ಯೂಃ 1